**OS No. 8/2014**
**DW-2**

<u>ಸಾಕ್ಷಿಯನ್ನು ದಿಃ **07.03.2022** ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.</u>

<u>ಪಾಟೀಸವಾಲುಃ ವಾದಿ ಪರ ಶ್ರೀ ಎ ಎಲ್ ಎಸ್ ವಕೀಲರಿಂದಃ</u>

ಸರ್ವೆ ನಂಬರ್ **29** ರಲ್ಲಿ ಒಟ್ಟು **4** ಎಕರೆ **23** ಗುಂಟೆ ಜಮೀನು ಇದೆ ಎಂದರೆ ಸರಿ. ಸದರಿ ವಿಸ್ತೀರ್ಣದ ಪೈಕಿ **1** ಎಕರೆ **21** ಗುಂಟೆ ನನ್ನ ಹೆಸರಿನಲ್ಲಿ ಇದೆ ಎಂದರೆ ಸರಿ. ದಿನಾಂಕಃ **15.06.2000** ರದ ನಂತರದಲ್ಲಿ ಆಗಿರುವ ವಿಭಾಗ ಪತ್ರವನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ನನ್ನ ಜಮೀನಿನ ಪೂರ್ವದ ಕಡೆಗೆ ನಂಜುಂಡಸ್ವಾಮಿ ಅವರ **1** ಎಕರೆ **21** ಗುಂಟೆ ಜಮೀನು ಸದರಿ ಸರ್ವೆ ನಂಬರ್ ನಲ್ಲಿ ಇದೆ ಎಂದರೆ ಸರಿ. ಸದರಿ ನಂಜುಂಡಸ್ವಾಮಿ ಅವರ ಜಮೀನಿನ ಪೂರ್ವದಲ್ಲಿ ವಾದಿಯವರ **1** ಎಕರೆ **21** ಗುಂಟೆ ಜಮೀನು ಇದೆ ಎಂದರೆ ಸರಿ. ಮೊದಲನೆ ಪೂರ್ವದ ಕಡೆ ಇರುವ ನಂಜುಂಡಸ್ವಾಮಿ ಮತ್ತು ನಾನು ಇಬ್ಬರು ಸೇರಿ ವಾದಿಯ **1** ಎಕರೆ **21** ಗುಂಟೆ ಜಮೀನಿನ ಪೈಕಿ **2** ಪಾತಿ ಅಂದಾಜು **6** ಗುಂಟೆಯನ್ನು ಒತ್ತುವರಿ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಆ ರೀತಿ ನಾನು ಮತ್ತು ನಂಜುಂಡಸ್ವಾಮಿ ಒತ್ತುವರಿ ಮಾಡಿರುವುದರಿಂದ ವಾದಿ ಬರಿ **1** ಎಕರೆ **15** ಗುಂಟೆ ಜಮೀನಿನಲ್ಲಿ ಮಾತ್ರ ಸಾಗುವಳಿ ಮಾಡುತ್ತಿರುತ್ತಾರೆ ಎಂದರೆ ಸರಿಯಲ್ಲ. ಈ ದಾವೆ ಸಲ್ಲಿಸುವ, ನೋಟೀಸನ್ನು ನೀಡುವ ಮೊದಲು ವಾದಿ ನಾನು ಒತ್ತುವರಿ ಮಾಡಿರುವ ಜಾಗದ ಬಗ್ಗೆ ನನ್ನ ಬಳಿ ಮಾತುಕತೆ ಮಾಡಿರುತ್ತಾರೆ ಎಂದರೆ ಸರಿ. ನನ್ನ ಜಮೀನಿನಲ್ಲಿ **6** ಗುಂಟೆ ಜಮೀನು ವ್ಯತ್ಯಾಸ ಬರುತ್ತಿದೆ ಅದನ್ನು ನನಗೆ ಬಿಟ್ಟುಕೊಡಿ ಎಂದು ಕೇಳಿದ್ದರು, ಆದರೆ ಆ ರೀತಿ ಯಾವುದೇ ವ್ಯತ್ತಾಸ ಆಗಿರುವುದಿಲ್ಲ ಎಂದು ಹೇಳಿರುತ್ತೇನೆ. ನಂತರದಲ್ಲಿ ಯಾವುದೇ ಅಳತೆ ಮಾಡಿರುವುದಿಲ್ಲ. ವಿಭಾಗ ಪತ್ರ ಮಾಡುವ ಸಮಯದಲ್ಲಿ ಮಾತ್ರ ಅಳತೆ ಮಾಡಿರುತ್ತೇವೆ. ನಾನು ಮತ್ತು **1** ನೇ ಪ್ರತಿವಾದಿ ಆ ರೀತಿ **6** ಗುಂಟೆ ಜಮೀನನ್ನು ಒತ್ತುವರಿ ಮಾಡಿರುವುದರಿಂದ ಪಸಲು ನಷ್ಟವನ್ನು ವಾದಿಗೆ ನೀಡಬೇಕಾಗುತ್ತದೆ ಎಂದರೆ ಸರಿಯಲ್ಲ. ನಾನು

ಸಹ **1** ಪಾತಿ ಮೂರು ಗುಂಟೆ ಜಮೀನನ್ನು ಒತ್ತುವರಿ ಮಾಡಿದ್ದರೂ ಸಹ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ**.**

<u>ಮರು ವಿಚಾರಣೆಃ ಇಲ್ಲ.</u>

**(**ತೆರೆದ ನ್ಯಾಯಾಲಯದಲ್ಲಿ ಈ ಮೇಲೆ ಸಾಕ್ಷಿ ಹೇಳಿದ ಸಾಕ್ಯವನ್ನು ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿರುತ್ತಾರೆ**.)**

ಓ ಹೇ ಕೇ ಸ ಇದೆ

ಹೆಚ್ಚುವರಿ ಸಿವಿಲ್ ನ್ಯಾಯಾಲಯ ಮತ್ತು
ಜೆ**.**ಎಂ**.**ಎಫ್**.**ಸಿ**.** ತಿ**.**ನರಸೀಪುರ